**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 3/2021 ಪಿ.ಡಬ್ಲ್ಯೂಃ 9

ಸಿ.ಡಬ್ಲ್ಯೂಃ 9

| | |
|---|---|
| ಸಾಕ್ಷಿದಾರರ ಹೆಸರು | ಅಬುಬಕ್ಕರ್ ಸಿದ್ದೀಕ್ |
| ತಂದೆಯ ಹೆಸರು | ಟಿ.ಮಯ್ಯದಿ |
| ವಯಸ್ಸು | 42 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಹೆಜಮಾಡಿ |

ದಿನಾಂಕಃ 13-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಆರೋಪಿತರು ಗೊತ್ತು. ಮೃತ ಸದಾಕತ್ ಅನ್ಸಾರಿ ಆರೋಪಿತರ ಮನೆಯವರು, ಆತನೂ ಸಹ ಗೊತ್ತು. ತಾರೀಕು 22-05-2020 ರಂದು ಸದರಿ ಸದಾಕತ್ ಅನ್ಸಾರಿ ಕಾಣೆಯಾಗಿದ್ದರೆಂದು, ಅದಕ್ಕಾಗಿ ಹುಡುಕಾಡಿದಾಗ, ಗುಂಡಿ ರಸ್ತೆಯ ತೋಡಿಯಲ್ಲಿ ಅವರು ಬಿದ್ದಿದ್ದರು. ಅದಕ್ಕಾಗಿ ಪೊಲೀಸರು ತಪಾಸಣೆಗಾಗಿ ಬಂದಿದ್ದರು. ಆಗ ನಾನು ಮತ್ತು ಚಾಸಾ-10 ಇದ್ದೆವು. ಅಲ್ಲಿ ಇದ್ದ 2 ನೇ ಆರೋಪಿ ಜಾಗೆಯನ್ನು ತೋರಿಸಿದ್ದ. ಆ ಜಾಗೆ ಒಂದು ನೀರು ಹೋಗುವ ತೋಡು. ಆ ತೋಡಿನಲ್ಲಿ ಬಲಮಗ್ಗುಲಾಗಿ ಅಕ್ಟೀವಾ ಹೋಂಡಾ ಸ್ಕೂಟರ್ ಬಿದ್ದಿತ್ತು. ಆ ಸ್ಕೂಟರ್ ನ ಬಲಬದಿಯಲ್ಲಿ ಸ್ವಲ್ಪ ಜಖಂಗಳು ಇತ್ತು. ಪೊಲೀಸರು ಆ ಸ್ಥಳವನ್ನು ಪರಿಶೀಲಿಸಿ, ಸ್ಕೂಟರ್ ನ್ನು ವಶಪಡಿಸಿಕೊಂಡಿದ್ದರು. ಆಗ ಬರೆದ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-10** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-10(ಎ) ಎಂದು ಗುರುತಿಸಿದ್ದೇನೆ. ಆಗ ಸಮಯ ಬೆಳಿಗ್ಗೆ 11.30 ಗಂಟೆಯಿಂದ 12.30 ಗಂಟೆ. ಆ ಸಮಯದಲ್ಲಿ ತೆಗೆದಿದ್ದ ಒಂದು ಪೋಟೋವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-11** ಎಂದು ಗುರುತಿಸಿದೆ. ನಿಪಿ-10 ರ ಜಾಗೆಯಲ್ಲಿ ಬರೆದ

ನಕಾಶೆಯೊಂದನ್ನು ಈಗ ನೋಡಿ ಅದನ್ನು **ನಿಶಾನೆ ಪಿ-12,** ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-12(ಎ) ಎಂದು ಗುರುತಿಸಿದ್ದೇನೆ.

2) ಅದೇ ದಿನ ಪೊಲೀಸರು ನನ್ನನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಯ ಶವಾಗಾರಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಸದಾಕತ್ ಅನ್ಸಾರಿ ಇವರ ಶವ ಇತ್ತು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ-10 ,11 ಮತ್ತು 2 ನೇ ಆರೋಪಿ ಸಹ ಇದ್ದ. ಶವ ತಪಾಸಣೆಯ ಸಮಯದಲ್ಲಿ ಮೃತನ ಎಡಕೆನ್ನೆಯ ಮೇಲೆ ಗಾಯ ಇರುವುದು ಕಂಡು ಬಂದಿತ್ತು. ಮೃತನ ಮೈಮೇಲೆ ಪ್ಯಾಂಟ್ , ಶರ್ಟ ಮತ್ತು ಬನಿಯನ್ ಧರಿಸಿದ್ದ. ಅಲ್ಲಿ ಮಧ್ಯಾಹ್ನ 2.00 ರಿಂದ 4.00 ಗಂಟೆಯ ಸಮಯದಲ್ಲಿ ಶವ ತನಿಖೆ ಮಾಡಿದ್ದರು. ಸದರಿ ಶವ ತನಿಖಾ ತಪಾಸಣೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-13,** ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-13(ಎ)** ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಪೋಟೋ ನಿಪಿ-2 ಮತ್ತು ಇನ್ನೊಂದು ಪೋಟೋವನ್ನು **ನಿಶಾನೆ ಪಿ-14** ಎಂದು ಗುರುತಿಸಿದ್ದೇನೆ. ನಿಪಿ-14 ರಲ್ಲಿ ನಾನು, ಚಾಸಾ-10, 11 ಮತ್ತು 2 ನೇ ಆರೋಪಿ ಇದ್ದೇವೆ. ನಿಪಿ-11 ರ ಜಾಗೆಯನ್ನು ಸಹ 2 ನೇ ಆರೋಪಿ ತೋರಿಸಿದ್ದ. ಆದಿನ ನಿಪಿ-11 ಜಾಗೆಯಲ್ಲಿ ಜಪ್ತಾದ ಸ್ಕೂಟರ್ ನಿಪಿ-1 ರ ಪೋಟೋದಲ್ಲಿದೆ.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ**

1) ನಿಪಿ-10 ರ ಸಮಯದಲ್ಲಿ ಮೃತನ ಶವ ಅಲ್ಲಿ ಇರಲಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ